| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**302/2025** | |
| ಡಿ.ಡಬ್ಲ್ಯು-**1** | |
| | |
| ಆರೋಪಿಯ ಹೆಸರು | ಪ್ರಮಿಳಾದೇವಿ ಮಾಳಿಗೆ |
| ಗಂಡನ ಹೆಸರು | ಹರೀಶ್ |
| ತಂದೆಯ ಹೆಸರು | ಮಾರುತಿ ಮಾಳಿಗೆ |
| ವಯಸ್ಸು | **59** ವರ್ಷ |
| ಉದ್ಯೋಗ | ಸಹಶಿಕ್ಷಕಿ, ಎಚ್ ಪಿ ಎಸ್ ಶಾಲೆ, ಮಧುರಖಂಡಿ |
| ವಾಸಸ್ಥಳ | ರಾಮೇಶ್ವರ ಕಾಲೋನಿ, ಜಮಖಂಡಿ |

<u>ದಿನಾಂಕ **19.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಆರೋಪಿ ಪರ ಶ್ರೀ.ವ್ಹಿ ಬಿ ಟಿ ವಕೀಲರಿಂದಃ-</u>

1. ಕವಿತಾ ತಂದೆ ಕಲ್ಲಪ್ಪ ರಾಮದುರ್ಗ ಇವರ ಮೂಲಕ ನನಗೆ ಫಿರ್ಯಾದುದಾರರ ಪರಿಚಯವಾಗಿರುತ್ತದೆ. ಸುನಂದಾ ಕಾಂಬಳೆ, ಕಾಂಚನಾ ಗಂಡ ಅರ್ಜುನ್ ಕಲ್ಯಾಣಿ, ಲಕ್ಷ್ಮೀ ಖರೆ, ರಾಜೇಶ್ವರಿ ಬಿಜ್ಜರಗಿ ಮತ್ತು ಮಹಾದೇವಿ ಗಂಡ ಕಲ್ಲಪ್ಪ ರಾಮದುರ್ಗ ಇವರುಗಳು ನನಗೆ ಬಿ.ಸಿ ಗೆ ಹಣ ಹೂಡಲು ಹೇಳಿರುತ್ತಾರೆ. ನಾನು ಈ ಮೇಲೆ ಹೇಳಿದ ಐದು ಜನರ ಮಾತು ಕೇಳಿ, ನಂತರ ಪ್ರತಿ ತಿಂಗಳು ರೂ.5,000/- ಬಿ.ಸಿ. ಗೆ ಹಣ ಹಾಕಿರುತ್ತೇನೆ. ನನ್ನಂತೆ ಒಟ್ಟು 100 ಜನ ಬಿ.ಸಿ. ಗೆ ಹಣ ಹಾಕಿರುತ್ತಾರೆ. ಎಲ್ಲಾ ಸದಸ್ಯರು ಒಟ್ಟು 10 ಚೆಕ್‌ಗಳನ್ನು ಕೊಡಬೇಕೆಂದು ಒಪ್ಪಂದವಾಗಿತ್ತು. ಬಿ.ಸಿ. ನಡೆಸುತ್ತಿದ್ದ ಕವಿತಾ ತಂದೆ ಕಲ್ಲಪ್ಪ ರಾಮದುರ್ಗ ಇವರಿಗೆ ನನ್ನ ಖಾತೆಯ ಒಟ್ಟು 10 ಚೆಕ್ ಗಳನ್ನು ನೀಡಿರುತ್ತೇನೆ. ಸದರಿ ಬಿ.ಸಿ. ವ್ಯವಹಾರದಲ್ಲಿ ಕಮೀಷನ್ ಹಂಚಿಕೆ ಕುರಿತು ಎಲ್ಲಾ ಸದಸ್ಯರಲ್ಲಿ ಜಗಳ ಬಂದಿರುತ್ತದೆ. ಆದ್ದರಿಂದ ನಾನು ನನ್ನ ಪಾಲಿನ ಕಮೀಷನ್ ಹಣವನ್ನು ಕೊಡು ಎಂದು ಕವಿತಾ ತಂದೆ ಕಲ್ಲಪ್ಪ ರಾಮದುರ್ಗ ಇವರಿಗೆ ಕೇಳಿರುತ್ತೇನೆ. ಅವರು ನನಗೆ ಹಣ ಕೊಟ್ಟಿರುವುದಿಲ್ಲ. ನಂತರ ನಾನು ಹಣ ಕೇಳಲು ಹೋದಾಗ ನನ್ನ ಮೇಲೆ ಕೂಗಾಡಿ ವಾಪಸ್ ಕಳುಹಿಸಿರುತ್ತಾರೆ. ತದನಂತರ ನಾನು ಮತ್ತೆ ಹಣ ಕೇಳಿದಾಗ, ಅವರು ಹಣ ಕೊಡುವುದಿಲ್ಲ ಎಂದು ಹೇಳಿ, ನಿಮ್ಮ ಚೆಕ್‌ಗಳು ನನ್ನ ಬಳಿ ಇರುತ್ತವೆ, ನಾನು ಕೋರ್ಟಿಗೆ ಅಡ್ಡಾಡಲು ಹಚ್ಚುತ್ತೇನೆ ಎಂದು ಹೇಳಿರುತ್ತಾರೆ. ನನಗೆ ಬರಬೇಕಾದ ಕಮೀಷನ್ ಹಣ ಆಕೆ ನನಗೆ ಕೊಟ್ಟಿರುವುದಿಲ್ಲ.

2. ನಾನು ಸದರಿ ಕವಿತಾ ತಂದೆ ಕಲ್ಲಪ್ಪ ರಾಮದುರ್ಗ ಇವರಿಗೆ ನನ್ನ ಚೆಕ್‌ಗಳನ್ನು ವಾಪಸ್ ಕೊಡಲು ಕೇಳಿರುತ್ತೇನೆ, ಆದರೆ ಅವರು ನನಗೆ ಅವುಗಳನ್ನು ತಿರುಗಿ ನೀಡಿರುವುದಿಲ್ಲ. ನಂತರ ಅವರು ಸದರಿ ಚೆಕ್‌ಗಳು ಪ್ರಸ್ತುತ ಫಿರ್ಯಾದುದಾರರ ಬಳಿ ಇವೆ ಎಂದು ನನಗೆ ಹೇಳಿರುತ್ತಾರೆ. ನಂತರ ನಾನು

ಫಿರ್ಯಾದುದಾರರಿಗೆ ಚೆಕ್‌ಗಳನ್ನು ಕೊಡಲು ಕೇಳಿದಾಗ, ಆಕೆ ಲಕ್ಷ್ಮೀ ಖರೆ ಇವರ ಹತ್ತಿರ ಇರುತ್ತವೆ ಎಂದು ಹೇಳಿರುತ್ತಾರೆ. ನಂತರ ನಾನು ಲಕ್ಷ್ಮೀ ಖರೆ ಇವರಿಗೆ ಚೆಕ್‌ಗಳನ್ನು ಕೊಡಲು ಕೇಳಿದಾಗ, ಆಕೆ ಸುನಂದಾ ಕಾಂಬಳೆ ಇವರ ಹತ್ತಿರ ಇರುತ್ತವೆ ಎಂದು ಹೇಳಿರುತ್ತಾರೆ. ಅಂತಿಮವಾಗಿ ಸದರಿಯವರು ನನ್ನ ಚೆಕ್‌ಗಳನ್ನು ನೀಡಿರುವುದಿಲ್ಲ. ನಂತರ ಫಿರ್ಯಾದುದಾರರು ಈ ಫಿರ್ಯಾದನ್ನು ನನ್ನ ವಿರುದ್ಧ ರೂ.7,00,000/- ಹಣ ಕುರಿತಾಗಿ ಸಲ್ಲಿಸಿರುತ್ತಾರೆ. ನಾನು ಫಿರ್ಯಾದುದಾರರಿಗೆ ನನ್ನ ಯಾವುದೇ ಚೆಕ್‌ಗಳನ್ನು ನೀಡಿರುವುದಿಲ್ಲ. ನಾನು ಫಿರ್ಯಾದುದಾರರಿಂದ ಯಾವತ್ತಿಗೂ ರೂ.7,00,000/- ಹಣ ತೆಗೆದುಕೊಂಡಿರುವುದಿಲ್ಲ. ನನ್ನ ಮತ್ತು ಫಿರ್ಯಾದುದಾರರ ಮಧ್ಯ ಯಾವುದೇ ಹಣದ ಕುರಿತಾದ ವ್ಯವಹಾರ ಇರುವುದಿಲ್ಲ. ನನ್ನ ವಿರುದ್ಧ ಕವಿತಾ ಗಂಡ ಕಲ್ಲಪ್ಪ ರಾಮದುರ್ಗ ರವರು ನನ್ನ ವಿರುದ್ಧ ಒಟ್ಟು ಮೂರು ಫಿರ್ಯಾದುಗಳನ್ನು ಸಲ್ಲಿಸಿದ್ದು, ಆ ಪ್ರಕರಣಗಳಲ್ಲಿ ನ್ಯಾಯಾಲಯವು ನನ್ನನ್ನು ನಿರ್ದೋಶಿ ಎಂದು ಬಿಡುಗಡೆ ಮಾಡಿರುತ್ತದೆ. ಲಕ್ಷ್ಮೀ ಖರೆ ಮತ್ತು ಬಸವರಾಜ ಎರಗೊಪ್ಪ ಎನ್ನುವವರು ತಲಾ ಒಂದು ಫಿರ್ಯಾದನ್ನು ನನ್ನ ವಿರುದ್ಧ ಸಲ್ಲಿಸಿದ್ದು, ಅವುಗಳು ವಿಚಾರಣೆಗಾಗಿ ಬಾಕಿ ಇರುತ್ತವೆ. ಫಿರ್ಯಾದುದಾರರು ನನ್ನ ವಿರುದ್ಧ ಖೊಟ್ಟಿ ಫಿರ್ಯಾದು ಸಲ್ಲಿಸಿದ್ದು, ನನ್ನನ್ನು ನಿರ್ದೋಶಿ ಎಂದು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

3. ನಾನು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗಳೆಂದು ಗುರುತಿಸಲು ಕೋರುತ್ತೇನೆ.

(ಈಗ ನ್ಯಾಯಾಲಯದ ಸಮಯ ಮಧ್ಯಾಹ್ನ 2.00 ಗಂಟೆಯಾಗಿರುವುದರಿಂದ, ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR

Digitally signed by RAJASHEKHAR
Date: 2026.01.21 18:17:25 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

<u>ದಿನಾಂಕ **19.01.2026** ರಂದು ಮಧ್ಯಾಹ್ನ ಡಿ.ಡಬ್ಲ್ಯೂ-**1**ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ- ಆರೋಪಿ ಪರ ಶ್ರೀ.ವ್ಹಿ ಬಿ ಟಿ ವಕೀಲರಿಂದಃ-</u>

1. ಎರಡು ಪೇ ಸ್ಲಿಪ್‌ಗಳ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು.

2. ಎರಡು ವೇತನ ವಿವರಗಳ ಪಟ್ಟಿಯ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-3 ಮತ್ತು 4 ಎಂದು ಗುರುತಿಸಲಾಯಿತು.

3. ಎರಡು ವೇತನ ಪ್ರಮಾಣ ಪತ್ರಗಳ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-5 ಮತ್ತು 6 ಎಂದು ಗುರುತಿಸಲಾಯಿತು.

4. ಸಿಸಿ.ನಂ.506/2023 ರಲ್ಲಿಯ ಫಿರ್ಯಾದನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-7 ಎಂದು ಗುರುತಿಸಲಾಯಿತು.

5. ಒಂದು ಚೆಕ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-8 ಎಂದು ಗುರುತಿಸಲಾಯಿತು.

6. ಒಂದು ರಿರ್ಟನ್ ಮೆಮೋ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

7. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-10 ಎಂದು ಗುರುತಿಸಲಾಯಿತು.

8. ಒಂದು ಅಂಚೆ ರಶೀದಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-11 ಎಂದು ಗುರುತಿಸಲಾಯಿತು.

9. ಎರಡು ಅಂಚೆ ಸ್ವೀಕೃತಿಯ ಧೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-12 ಮತ್ತು 13 ಎಂದು ಗುರುತಿಸಲಾಯಿತು.

10. ಖಾಸಗಿ ಫಿರ್ಯಾದು ನಂ.28/2024 ರಲ್ಲಿಯ ಫಿರ್ಯಾದನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-14 ಎಂದು ಗುರುತಿಸಲಾಯಿತು.

11. ಒಂದು ಚೆಕ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-15 ಎಂದು ಗುರುತಿಸಲಾಯಿತು.

12. ಒಂದು ರಿರ್ಟನ್ ಮೆಮೋ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-16 ಎಂದು ಗುರುತಿಸಲಾಯಿತು.

13. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-17 ಎಂದು ಗುರುತಿಸಲಾಯಿತು.

14. ಒಂದು ಅಂಚೆ ರಶೀದಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-18 ಎಂದು ಗುರುತಿಸಲಾಯಿತು.

15. ಒಂದು ಅಂಚೆ ಲಕೋಟೆಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-19 ಎಂದು ಗುರುತಿಸಲಾಯಿತು.

16. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-20 ಎಂದು ಗುರುತಿಸಲಾಯಿತು.

17. ಖಾಸಗಿ ಫಿರ್ಯಾದಿ ನಂ.29/2024 ರಲ್ಲಿಯ ಫಿರ್ಯಾದನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-21 ಎಂದು ಗುರುತಿಸಲಾಯಿತು.

18. ಒಂದು ಚೆಕ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-22 ಎಂದು ಗುರುತಿಸಲಾಯಿತು.

19. ಒಂದು ರಿರ್ಟನ್ ಮೆಮೋ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-23 ಎಂದು ಗುರುತಿಸಲಾಯಿತು.

20. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-24 ಎಂದು ಗುರುತಿಸಲಾಯಿತು.

21. ಒಂದು ಅಂಚೆ ರಶೀದಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-25 ಎಂದು ಗುರುತಿಸಲಾಯಿತು.

22. ಒಂದು ಅಂಚೆ ಲಕೋಟೆಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-26 ಎಂದು ಗುರುತಿಸಲಾಯಿತು.

23. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-27 ಎಂದು ಗುರುತಿಸಲಾಯಿತು.

24. ಖಾಸಗಿ ಫಿರ್ಯಾದು ನಂ.30/2024 ರಲ್ಲಿಯ ಫಿರ್ಯಾದನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-28 ಎಂದು ಗುರುತಿಸಲಾಯಿತು.

25. ಒಂದು ಚೆಕ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-29 ಎಂದು ಗುರುತಿಸಲಾಯಿತು.

26. ಒಂದು ರಿರ್ಟನ್ ಮೆಮೋ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-30 ಎಂದು ಗುರುತಿಸಲಾಯಿತು.

27. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-31 ಎಂದು ಗುರುತಿಸಲಾಯಿತು.

28. ಒಂದು ಅಂಚೆ ರಶೀದಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-32 ಎಂದು ಗುರುತಿಸಲಾಯಿತು.

29. ಒಂದು ಅಂಚೆ ಲಕೋಟೆಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-33 ಎಂದು ಗುರುತಿಸಲಾಯಿತು.

30. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-34 ಎಂದು ಗುರುತಿಸಲಾಯಿತು.

31. ಖಾಸಗಿ ಫಿರ್ಯಾದನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-35 ಎಂದು ಗುರುತಿಸಲಾಯಿತು.

32. ಒಂದು ಚೆಕ್‌ನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-36 ಎಂದು ಗುರುತಿಸಲಾಯಿತು.

33. ಒಂದು ರಿರ್ಟನ್ ಮೆಮೋ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-37 ಎಂದು ಗುರುತಿಸಲಾಯಿತು.

34. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-38 ಎಂದು ಗುರುತಿಸಲಾಯಿತು.

35. ಒಂದು ಅಂಚೆ ರಶೀದಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-39 ಎಂದು ಗುರುತಿಸಲಾಯಿತು.

36. ಒಂದು ಅಂಚೆ ಸ್ವೀಕೃತಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-40 ಎಂದು ಗುರುತಿಸಲಾಯಿತು.

37. ಒಂದು ಲೀಗಲ್ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-41 ಎಂದು ಗುರುತಿಸಲಾಯಿತು.

38. ಪ್ರತ್ಯುತ್ತರ ನೋಟೀಸಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-42 ಎಂದು ಗುರುತಿಸಲಾಯಿತು.

39. ಎರಡು ಅಂಚೆ ರಶೀದಿಗಳ ಧೃಢೀಕೃತ ನಕಲಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ-43 ಮತ್ತು 44 ಎಂದು ಗುರುತಿಸಲಾಯಿತು.

40. ಒಂದು ಅಂಚೆ ಸ್ವೀಕೃತಿಯ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-45 ಎಂದು ಗುರುತಿಸಲಾಯಿತು ಮತ್ತು ಅಂಚೆ ಲಕೋಟೆಯ ಧೃಢೀಕೃತ ನಕಲನ್ನು ನಿಡಿ-45(a) ಎಂದು ಗುರುತಿಸಲಾಯಿತು.

41. ಸಿಸಿ.ನಂ.1586/2024 ರಲ್ಲಿಯ ತೀರ್ಪಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-46 ಎಂದು ಗುರುತಿಸಲಾಯಿತು.

42. ಪಿಸಿ.ನಂ.28/2024 ರಲ್ಲಿಯ ಪಿಡಬ್ಲ್ಯು-1 ರವರ ಹೇಳಿಕೆ ಮತ್ತು ಪಾಟೀ ಸವಾಲಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-47 ಎಂದು ಗುರುತಿಸಲಾಯಿತು.

43. ಸಿಸಿ.ನಂ.1586/2024 ರಲ್ಲಿಯ ಡಿಡಬ್ಲ್ಯು-1ರವರ ಸಾಕ್ಷ್ಯದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-48 ಎಂದು ಗುರುತಿಸಲಾಯಿತು.

44. ಸಿಸಿ.ನಂ.1587/2024 ರಲ್ಲಿಯ ತೀರ್ಪಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-49 ಎಂದು ಗುರುತಿಸಲಾಯಿತು.

45. ಪಿಸಿ.ನಂ.29/2024 ರಲ್ಲಿಯ ಪಿಡಬ್ಲ್ಯು-1 ರವರ ಹೇಳಿಕೆ ಮತ್ತು ಪಾಟೀ ಸವಾಲಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-50 ಎಂದು ಗುರುತಿಸಲಾಯಿತು.

46. ಸಿಸಿ.ನಂ.1587/2024 ರಲ್ಲಿಯ ಡಿಡಬ್ಲ್ಯು-1ರವರ ಸಾಕ್ಷ್ಯದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-51 ಎಂದು ಗುರುತಿಸಲಾಯಿತು.

47. ಸಿಸಿ.ನಂ.1588/2024 ರಲ್ಲಿಯ ತೀರ್ಪಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-52 ಎಂದು ಗುರುತಿಸಲಾಯಿತು.

48. ಪಿಸಿ.ನಂ.30/2024 ರಲ್ಲಿಯ ಪಿಡಬ್ಲ್ಯು-1 ರವರ ಹೇಳಿಕೆ ಮತ್ತು ಪಾಟೀ ಸವಾಲಿನ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-53 ಎಂದು ಗುರುತಿಸಲಾಯಿತು.

49. ಸಿಸಿ.ನಂ.1588/2024 ರಲ್ಲಿಯ ಡಿಡಬ್ಲ್ಯು-1ರವರ ಸಾಕ್ಷ್ಯದ ಧೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-54 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಫಿರ್ಯಾದುದಾರರ ಪರ ವಕೀಲರಿಂದಃ-

(ಫಿರ್ಯಾದುದಾರರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ. ಆದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.01.21 18:17:51 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.